**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**

**ನಂ.ಕವಿವಿ/ಸಿ.ಡಿ.ಸಿ(ಸಂಯೋಜನೆ)/2022-23/** 605 **ದಿನಾಂಕ:** 09-05-2022

**ಸಂಯೋಜನಾ ದಿನಾಂಕ ವಿಸ್ತಾರಣಾ ಅಧಿಸೂಚನೆ**

**ವಿಷಯ** : 2022-23 ನೇ ಶೈಕ್ಷಣಿಕ ವರ್ಷಕ್ಕಾಗಿ ಹೊಸ ಮಹಾವಿದ್ಯಾಲಯ, ಸ್ನಾತಕ/ಸ್ನಾತಕೋತ್ತರ ಕೋರ್ಸ, ಹೊಸ ಕೋರ್ಸ ಪ್ರಾರಂಭಿಸಲು ಮತ್ತು ಈಗಾಗಲೇ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಮುಂದುವರಿಕೆ/ವಿಸ್ತರಣೆ ಹಾಗೂ ಶಾಶ್ವತ ಸಂಯೋಜನೆ ಪ್ರಸ್ಥಾವನೆ ಸಲ್ಲಿಸುವ ದಿನಾಂಕ ವಿಸ್ತರಣೆ ಮಾಡಿರುವ ಕುರಿತು.

**ಉಲ್ಲೇಖ** : ಮಾನ್ಯ ಕುಲಪತಿಗಳ ಆದೇಶ ದಿನಾಂಕ: 09/05/2022

***********

2022-23ನೇ ಶೈಕ್ಷಣಿಕ ವರ್ಷಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಧಾರವಾಡ, ಗದಗ ಹಾಗೂ ಹಾವೇರಿ, ಕಾರವಾರ ಜಿಲ್ಲೆಗಳಲ್ಲಿಯ ನೊಂದಾಯಿತ ಸಂಘ ಅಥವಾ ನೊಂದಾಯಿತ ಸಾರ್ವಜನಿಕ ಟ್ರಸ್ಟಗಳಿಂದ ಸ್ಥಾಪಿಸಲ್ಪಡುವ ಹೊಸ ಮಹಾವಿದ್ಯಾಲಯ ಹಾಗೂ ಸ್ನಾತಕ/ಸ್ನಾತಕೋತ್ತರ ಕೋರ್ಸು ಮತ್ತು ಪ್ರಸ್ತುತ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಲ್ಲಿ ಕೋರ್ಸುಗಳ ಮುಂದುವರಿಕೆ/ವಿಸ್ತರಣೆ/ಹೊಸ ಕೋರ್ಸು, ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಮುಂದುವರಿಕೆ/ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಳ ಕುರಿತು ಪ್ರಸ್ಥಾವನೆ ಸಲ್ಲಿಸಲು ದಿನಾಂಕ 28-04-2022 ರಂದು ಅಧಿಸೂಚನೆ ಹೊರಡಿಸಲಾಗಿತ್ತು ಹಾಗೂ ಅದರಲ್ಲಿ ಕೊನೆಯ ದಿನಾಂಕಗಳನ್ನು ಸಹ ಪ್ರಕಟಿಸಲಾಗಿತ್ತು. ಆದರೆ, ಅನೇಕ ಮಹಾವಿದ್ಯಾಲಯಗಳ ಪ್ರಾಚಾರ್ಯರ ವಿನಂತಿ ಮೇರೆಗೆ ಮತ್ತು ತಂತ್ರಾಂಶದಲ್ಲಿ ಕೆಲವೊಂದು ತಾಂತ್ರಿಕ ತೊಂದರೆಗಳಾಗುತ್ತಿರುವದರಿಂದ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಈ ಕೆಳಗಿನಂತೆ ದಿನಾಂಕವನ್ನು ವಿಸ್ತರಿಸಲಾಗಿದೆ.

| | | |
|---|---|---|
| 1) | ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ (ದಂಡ ರಹಿತ) | 11-05-2022 ರಿಂದ 18-05-2022 ರ ವರೆಗೆ |
| 2) | ರೂ.10,981/- ದಂಡ ಶುಲ್ಕದೊಂದಿಗೆ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ | 19-05-2022 ರಿಂದ 24-05-2022 ರ ವರೆಗೆ |
| 3) | ರೂ.21,962/- ದಂಡ ಶುಲ್ಕದೊಂದಿಗೆ ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ | 25-05-2022 ರಿಂದ 31-05-2022 ರ ವರೆಗೆ |
| 4) | ಮೇಲ್ಕಾಣಿಸಿದ ಅವಧಿ ಮುಗಿದ ನಂತರ ದಂಡ ಶುಲ್ಕ ರೂ. 21,962/- ದೊಂದಿಗೆ ಮತ್ತು ಪ್ರತಿ ದಿನಕ್ಕೆ 2,197/- ದಂಡ ಶುಲ್ಕದೊಂದಿಗೆ ಮುಂದಿನ 7 ದಿನಗಳವರೆಗೆ ಅಂದರೆ ದಿನಾಂಕ: 01-06-2022 ರಿಂದ 07-06-2022ರ ವರೆಗೆ | |

I/c **ಕುಲಸಚಿವರು** 9/5